# ಬಿಜೆಪಿ
# ಸೋಲಿಸಿ
# ಭಾರತ ಉಳಿಸಿ

**CPI(M)**

## ಸಿಪಿಐ(ಎಂ)ಗೆ
## ಮತ ನೀಡಿ

## ಎಡಪಕ್ಷಗಳನ್ನು
## ಬಲಪಡಿಸಿ

: ಪ್ರಕಟಣೆ :

**ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)**

**ಕರ್ನಾಟಕ ರಾಜ್ಯ ಸಮಿತಿ**

ಪ್ರಚಾರದ ಮಹತ್ವ ಏನು ಎನ್ನುವುದನ್ನು ಹಿಟ್ಲರ್ ಚೆನ್ನಾಗಿ ಬಲ್ಲವನಾಗಿದ್ದ. ನಾಜಿ ಸರ್ಕಾರದಲ್ಲಿ ಜೋಸೆಫ್ ಗೊಬ್ಬೆಲ್ಸ್ ಪ್ರಚಾರ ಸಚಿವನಾಗಿದ್ದ. ನಾಜಿ ಪ್ರಚಾರದ ಕುಪ್ರಸಿದ್ಧ "ದೈತ್ಯ ಸುಳ್ಳು" ಮಂತ್ರದ ರೂವಾರಿಯೇ ಅವನಾಗಿದ್ದ. 'ನೀನು ಸುಳ್ಳು ಹೇಳುವುದಾದರೆ, ಅದು ದೈತ್ಯ ರೂಪದ್ದಿರಬೇಕು ಮತ್ತು ಅದನ್ನು ನೂರು ಬಾರಿ ಮತ್ತೆ ಮತ್ತೆ ಹೇಳಬೇಕು; ಆಗ ಜನ ಅದನ್ನು ನಂಬುತ್ತಾರೆ' ಇದೇ ಆ ಮಂತ್ರ ! ಬಹಳ ಹಿಂದೆಯೇ ಹಿಟ್ಲರ್ ಆರ್‌ಎಸ್‌ಎಸ್ ಸಿದ್ಧಾಂತದ ಮೇಲೆ ಹೆಚ್ಚು ಪ್ರಭಾವ ಬೀರಿದ್ದ. ಆದ್ದರಿಂದ ಬಿಜೆಪಿ ಮತ್ತದರ ಪರಿವಾರದವರು ಈ ಪ್ರಚಾರ ತಂತ್ರವನ್ನು ಪೂರಾ ಪೂರಾ ಬಳಸುತ್ತಿದ್ದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಅವರ ಪ್ರಧಾನ ಮಂತ್ರಿ ಅಭ್ಯರ್ಥಿಯಾದ ನರೇಂದ್ರ ಮೋದಿಯ ಪ್ರಚಾರ ವೈಖರಿ ಅಂತಹದ್ದೇ–ಶುದ್ಧ ಸುಳ್ಳಿನ ಕಂತೆ ! ದೈತ್ಯ ಹಸಿ ಸುಳ್ಳು!!

ಮೋದಿಯನ್ನು ಪ್ರಧಾನ ಮಂತ್ರಿ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದ್ದೇ ಆರ್‌ಎಸ್‌ಎಸ್. ಪ್ರಾಯಶಃ ಅದೇನು ಅಂತಹ ಆಶ್ಚರ್ಯದ ಸಂಗತಿಯಲ್ಲ; ಆರ್‌ಎಸ್‌ಎಸ್‌ನ ವಿರುದ್ಧ ದಾಖಲಾಗಿರುವ ಮೊಕದ್ದಮೆಗಳಲ್ಲಿನ ಮತ್ತು ಹಿಂದುತ್ವ ಉಗ್ರಗಾಮಿಗಳ ದಾಳಿಗಳಲ್ಲಿನ ಆರ್‌ಎಸ್‌ಎಸ್‌ನ ಪಾತ್ರವನ್ನು ಬುಡಮೇಲು ಮಾಡಲು ಮೋದಿಯಲ್ಲದೆ ಇನ್ನಾರನ್ನು ಆರ್‌ಎಸ್‌ಎಸ್ ನಂಬಬೇಕು?

ಕ್ಯಾರವಾನ್ ಮಾಸಪತ್ರಿಕೆಗೆ(ಫೆಬ್ರವರಿ 2014) ನೀಡಿದ ಸಂದರ್ಶನದಲ್ಲಿ ಅಸೀಮಾನಂದ ಹೊರ ಹಾಕಿದ ಸ್ಫೋಟಕ ಸಂಗತಿ ಆರ್‌ಎಸ್‌ಎಸ್‌ನ ಸಮಾಜಘಾತಕ ಕೃತ್ಯವನ್ನು ಬಹಿರಂಗಪಡಿಸಿದೆ. ನಾಗರಿಕರನ್ನು ಗುರಿಯಾಗಿಸಿದ ಸರಣಿ ಉಗ್ರಗಾಮಿ ಬಾಂಬ್ ಸ್ಫೋಟಗಳಲ್ಲಿ ಪ್ರಮುಖ ಆರೋಪಿಯಾಗಿರುವ ಅಸೀಮಾನಂದನ ಜತೆ ಆರ್‌ಎಸ್‌ಎಸ್‌ನ ರಾಷ್ಟ್ರೀಯ ಮುಖಂಡರ ಸಂಬಂಧ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ: ಮುಂದಿನ ತನಿಖೆಯಾಗಬೇಕಿದೆ.

82 ಅಮಾಯಕರ ಹತ್ಯೆಗೆ ಕಾರಣವಾದ ಮೂರು ಭಯೋತ್ಪಾದಕರ ದಾಳಿಗಳಲ್ಲಿ ಅಸೀಮಾನಂದ ಸಿಕ್ಕುಹಾಕಿಕೊಂಡಿದ್ದಾನೆ ಮತ್ತು ಇನ್ನಿತರ ಭಯೋತ್ಪಾದಕ ಪ್ರಕರಣಗಳಲ್ಲೂ ಅವನ ವಿರುದ್ಧ ತನಿಖೆಯಾಗುತ್ತಿದೆ. ಈಗಾಗಲೇ ತಿಳಿದಿರುವಂತೆ ಅವನು ಗುಜರಾತಿನ ಬುಡಕಟ್ಟು ಜನರ ಪ್ರದೇಶಗಳಲ್ಲಿ ಆರ್‌ಎಸ್‌ಎಸ್‌ನ ಸಂಘಟನೆಯಾದ ವನವಾಸಿ ಕಲ್ಯಾಣ ಸಂಘದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ. ಅವನು ನೀಡಿದ ಸಂದರ್ಶನದ ಪ್ರಕಾರ, ಇದೇ ಜಾಗದಲ್ಲಿ ಜುಲೈ 2005ರ ಆರ್‌ಎಸ್‌ಎಸ್ ಸಭೆಯ ನಂತರ, ಇಂದಿನ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತರು ಮತ್ತು ಅವರ ಜತೆ ಇದ್ದ ಇಂದ್ರೇಶ್‌ಕುಮಾರ್, ಗುಜರಾತ್ ರಾಜ್ಯದ ಡಾಂಗ್‌ನ ದೇವಸ್ಥಾನದಲ್ಲಿ ಅಸೀಮಾನಂದನನ್ನು ಭೇಟಿಯಾಗಿದ್ದರು. ಭಾರತದಾದ್ಯಂತ ಇರುವ ಹಲವಾರು ಮುಸ್ಲಿಮ್ ಪ್ರದೇಶಗಳ ಮೇಲೆ ಬಾಂಬ್ ಹಾಕುವ ಯೋಜನೆಯನ್ನು ಅವರು ಚರ್ಚಿಸಿದ್ದರು. ಆ

ಸಂದರ್ಶನದ ಪ್ರಕಾರ, "ನಾವು ಇದರಲ್ಲಿ ಸಿಕ್ಕುಹಾಕಿಕೊಳ್ಳುವುದಿಲ್ಲ, ಆದರೆ ನೀನು ಇದನ್ನು ಮಾಡುವುದಾದರೆ ನಾವು ನಿನ್ನ ಜತೆಗೆ ಇದ್ದೇವೆಂದು ತಿಳಿ,.. ನೀನು ಇದನ್ನು ಮಾಡಿದರೆ ನಾವು ನಿರಾತಂಕದಿಂದಿರುತ್ತೇವೆ.... ಅದು ನಮ್ಮ ಸಿದ್ಧಾಂತಕ್ಕೆ ಹೊಂದಿಕೊಂಡೇ ಇದೆ.... ಅದು ಹಿಂದುಗಳಿಗೆ ಬಹಳ ಮುಖ್ಯವಾದದ್ದು. ದಯವಿಟ್ಟು ಅದನ್ನು ಮಾಡಿಯೇ ತೀರು. ನಮ್ಮ ಆಶೀರ್ವಾದ ನಿನಗಿದೆ" ಎಂದು ಭಾಗವತ್ ಅವರು ಅಸೀಮಾನಂದನಿಗೆ ಹೇಳಿದರು.

ಆ ಸಂದರ್ಶನವನ್ನು ಅಸೀಮಾನಂದನ ಪರ ವಕೀಲ ನಿರಾಕರಿಸಿದ್ದಾನಾದರೂ, ಆ ಸಂದರ್ಶನವನ್ನು ಧ್ವನಿಸುರುಳಿಯಲ್ಲಿ ದಾಖಲಿಸಿಕೊಂಡಿದ್ದೇವೆ ಮತ್ತು ಎಲ್ಲಾ ಸುರುಳಿಗಳೂ ಲಭ್ಯವಿವೆ ಎಂದು ಕ್ಯಾರವಾನ್ ಪತ್ರಿಕೆ ಹೇಳಿಕೆ ನೀಡಿದೆ.

ಈ ಎಲ್ಲಾ ವಿಷಯಗಳ ಬಗ್ಗೆ ಮೋದಿ ದಿವ್ಯ ಮೌನ ವಹಿಸಿದ್ದಾರೆ. ಏಕೆ? ದೇಶದ ಉನ್ನತ ಹುದ್ದೆಗೆ ಹೋಗಲು ಬಯಸುವ ವ್ಯಕ್ತಿ ಕೊನೇಪಕ್ಷ ಅದನ್ನು ತನಿಖೆ ಮಾಡಿ ಎಂದಾದರೂ ಹೇಳುವ ಸೌಜನ್ಯ ತೋರಬೇಕಿತ್ತಲ್ಲ?

ಗುಜರಾತ್‌ನ 'ಅಭಿವೃದ್ಧಿ'ಯ ಮಾದರಿಯನ್ನು ಮುಂದಿಟ್ಟುಕೊಂಡು ಬಿಜೆಪಿಯು ಮೋದಿಗೆ "ವಿಕಾಸ ಪುರುಷ" ಎಂಬ ಮುಖವಾಡವನ್ನು ಹರಿಬಿಟ್ಟಿದೆ. ಈ ಭ್ರಾಮಕ ಪ್ರಚಾರ ಎರಡು ದೊಡ್ಡ ಸುಳ್ಳಿನ ಬುನಾದಿಯ ಮೇಲೆ ಕಟ್ಟಿದ್ದು. ಮೊದಲನೆಯದು– ಮೋದಿಯ ಗುಜರಾತಿನಲ್ಲಿ ಮುಸ್ಲಿಮರನ್ನೂ ಒಳಗೊಂಡಂತೆ ಕಂಡು ಕೇಳರಿಯದ ಅಭಿವೃದ್ಧಿಯಾಗಿದೆ. ಎರಡನೆಯದು 2002ರಲ್ಲಿ ನಡೆದ ಘಟನೆಗಳನ್ನು ಹೊರತು ಪಡಿಸಿ ಗುಜರಾತಿನಲ್ಲಿ ಯಾವುದೇ ಕೋಮುಗಲಭೆಗಳು ನಡೆದೇ ಇಲ್ಲ ಎಂಬುದು. ಅಭಿವೃದ್ಧಿಯನ್ನು ಸಾಧಿಸಲು ಕೋಮು ಸಂಘರ್ಷವನ್ನೂ ಮೀರಬಲ್ಲ ಸಂಕೇತವಾಗಿ ಮೋದಿಯನ್ನು ಮತ್ತೆ ಮತ್ತೆ ಬಿಂಬಿಸಲಾಗುತ್ತಿದೆ. 2004ರಲ್ಲಿ ಎನ್‌ಡಿಎ ಸರ್ಕಾರ "ಭಾರತ ಪ್ರಕಾಶಿಸುತ್ತಿದೆ" ಎಂಬ ಹಸಿಸುಳ್ಳಿನ ಅಬ್ಬರದ ಪ್ರಚಾರ ಮಾಡಿದಂತೆಯೇ ಇದೂ ಕೂಡ ಎಂಬುದು ಈಗ ಜಗಜ್ಜಾಹೀರಾಗಿದೆ. ದೊಂಬಿರಹಿತ ಗುಜರಾತ್ ಎಂಬ ವಾದದ ಹುರುಳನ್ನು ಈಗ ನೋಡೋಣ.

**ಮೋದಿಯ ಗುಜರಾತಿನಲ್ಲಿ ಕೋಮು ಹಿಂಸೆಯ ದಾಖಲೆಗಳು :**

ಗುಜರಾತ್ ದಂಗೆಗಳಿಂದ ಮುಕ್ತವಾಗಿದೆ ಎಂದು ಮೋದಿ ಪುನಃ ಪುನಃ ಹೇಳುತ್ತಿದ್ದಾರೆ. ಅದು ಹಸಿ ಸುಳ್ಳು. ಅಧಿಕಾರದಲ್ಲಿರಲಿ ಇಲ್ಲದಿರಲಿ ಇಡೀ ದೇಶದಲ್ಲಿ ನಡೆಯುವ ಪ್ರತಿ ಕೋಮುದಂಗೆಗಳಲ್ಲಿ, ಸಂಘರ್ಷಗಳಲ್ಲಿ, ಆರ್.ಎಸ್.ಎಸ್. ಪ್ರತಿಪಾದಿಸುವ ಹಿಂದುತ್ವ ಅಜೆಂಡಾವನ್ನು ಇಟ್ಟುಕೊಂಡ ಸಂಘಪರಿವಾರದ್ದೇ ಕೈವಾಡವಿರುತ್ತದೆ. ಈ ಚುನಾವಣೆಯನ್ನೇ ದೃಷ್ಟಿಯಲ್ಲಿಟ್ಟುಕೊಂಡು ಕೋಮು ವಿದ್ವೇಷವನ್ನು ಕಳೆದ ವರ್ಷ ನಡೆಸಿದ್ದನ್ನು ಅತಿ ಮುಖ್ಯವಾಗಿ ಇಲ್ಲಿ ಗಮನಿಸಬೇಕು.

2013ರಲ್ಲಿ ಗುಜರಾತಿನಲ್ಲಿ 66 ಕೋಮುಹಿಂಸೆಗಳ ಪ್ರಕರಣಗಳು ವರದಿಯಾಗಿವೆ. ಆ ಮೂಲಕ ಮೊದಲ ಐದು ರಾಜ್ಯಗಳಲ್ಲಿ ಒಂದು ಎಂಬ ಅವಮಾನಕಾರೀ ದಾಖಲೆಗೂ ಪಾತ್ರವಾಗಿದೆ.

ನಿಜವೆಂದರೆ 2013ರಲ್ಲಿ ಮಾತವಲ್ಲ, ಗುಜರಾತಿನ ಕೋಮು ಹಿಂಸೆಗಳ ನಕ್ಷೆ ಯಾವಾಗಲೂ ಏರುಮುಖದಲ್ಲಿಯೇ ಇರುತ್ತದೆ. 2012ರಲ್ಲಿ 57 ಪ್ರಕರಣಗಳು ನಡೆದು 5 ಜನ ಮೃತಪಟ್ಟಿದ್ದಾರೆ. ಸಂಘಪರಿವಾರ ಮತ್ತು ಮಾಧ್ಯಮಗಳ 'ನಮೋ' ಮಂತ್ರ ಜಪಕ್ಕೆ ವ್ಯತಿರಿಕ್ತವಾಗಿ 2002ರ ನಂತರವೂ ಕೋಮು ಹಿಂಸಾಚಾರದ ತೀವ್ರತೆಯ ಮಾಪನದಲ್ಲಿ ಗುಜರಾತ್ ಮೊದಲ 4ರಿಂದ 6ರ ಪಟ್ಟಿಯಲ್ಲಿಯೇ ಇದೆ. 2012ರಲ್ಲಿ ಲೋಕಸಭೆಗೆ ಕೊಟ್ಟ ವರದಿಯ ಪ್ರಕಾರ 2009 ರಿಂದ 2012ರವರೆಗೆ ಕೋಮು ಹಿಂಸೆಗೆ ಬಲಿಯಾಗಿ ಸತ್ತವರ ಸಂಖ್ಯೆ 344. ಅದರಲ್ಲಿ 32 ಎಂದರೆ ಸರಿ ಸುಮಾರು 10% ಗುಜರಾತಿನಲ್ಲಿ ಸಂಭವಿಸಿದ್ದು! ಈ ಅವಧಿಯಲ್ಲಿ ನಡೆದ 2300 ಕೋಮು ಹಿಂಸೆಗಳ ಪ್ರಕರಣಗಳಲ್ಲಿ 181 ನಡೆದಿದ್ದೂ ಗುಜರಾತಿನಲ್ಲಿಯೇ!

ಈ ಎಲ್ಲ ಪ್ರಕರಣಗಳ ಮೇಲೆ ಮುಸುಕು ಹಾಕಿ 2002ರ ಗುಜರಾತ್ ಹತ್ಯಾಕಾಂಡದ ಅಪವಾದದಿಂದ ಮೋದಿಯನ್ನು ಬಚಾವ್ ಮಾಡುವ ಮತ್ತು ಈಗಲೂ ನಡೆಯುತ್ತಿರುವ ಕೋಮು ಹಿಂಸೆಗಳನ್ನು ಮರೆಮಾಚಿ ಮೋದಿಯನ್ನು "ವಿಕಾಸ ಪುರುಷ" ಎಂದು ಬಿಂಬಿಸುತ್ತಿರುವುದು ಮೋದಿಯನ್ನು ಪ್ರಧಾನಿ ಅಭ್ಯರ್ಥಿಯಾಗಿ ಜನ ಮನ್ನಣೆ ಗಳಿಸಲೋಸುಗವೇ.

**ಇತರ ರಾಜ್ಯಗಳಲ್ಲಿ ಬಿ.ಜೆ.ಪಿ.ಯ ದಾಖಲೆಗಳು :**

ಬಿಜೆಪಿ ಆಡಳಿತ ನಡೆಸಿದ ಇತರ ರಾಜ್ಯಗಳಲ್ಲಿಯೂ ಪರಿಸ್ಥಿತಿ ಹೀಗೆಯೇ ಇದೆ. 2013ರಲ್ಲಿ ಮಧ್ಯಪ್ರದೇಶದಲ್ಲಿ ಕೋಮು ಹಿಂಸೆಯ ಪ್ರಕರಣಗಳು 84. ಇದು ಮಹಾರಾಷ್ಟ್ರದ 88ಕ್ಕಿಂತ ತುಸು ಮಾತ್ರ ಕಡಿಮೆ ಅಷ್ಟೆ. ಇದು ದೀರ್ಘಕಾಲದ ಧೋರಣೆಯ ಪ್ರತಿಬಿಂಬವೆಂದೇ ಪರಿಗಣಿಸಬೇಕು. 2012ರಲ್ಲಿ ಮಧ್ಯಪ್ರದೇಶದಲ್ಲಿ 92 ಕೋಮು ಹಿಂಸಾ ಪ್ರಕರಣಗಳಲ್ಲಿ 9 ಜನ ಸತ್ತಿದ್ದಾರೆ. 2009 ರಿಂದ 2012ರ ಅವಧಿಯಲ್ಲಿ 313 ಪ್ರಕರಣಗಳು ನಡೆದು 53 ಜನ ಸತ್ತಿದ್ದಾರೆ. ಮೊದಲ ಬಾರಿಗೆ ದಕ್ಷಿಣ ರಾಜ್ಯ ಕರ್ನಾಟಕದಲ್ಲಿ ದೊಡ್ಡ ಮಟ್ಟದಲ್ಲಿ ಸರ್ಕಾರೀ ಬೆಂಬಲಿತ ಕೋಮು ಹಿಂಸಾ ಪ್ರಕರಣಗಳು ಯಡ್ಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದವು. ಆಗ ನಡೆದ 735 ಪ್ರಕರಣಗಳಲ್ಲಿ 54 ಜನ ಮೃತಪಟ್ಟು ಕೋಮು ಹಿಂಸಾಪೀಡಿತ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ 3ನೇ ಸ್ಥಾನ ಗಳಿಸಿತು! ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಸಂಘಪರಿವಾರದ ಅಟ್ಟಹಾಸ ಈಗಲೂ ಮುಂದುವರೆದಿದೆ. ಪಬ್ ದಾಳಿ, ಹೋಂ ಸ್ಟೇ ಪ್ರಕರಣ, ವಿದ್ಯಾರ್ಥಿ ವಿದ್ಯಾರ್ಥಿನಿಯರ ಮೇಲೆ ನಿರಂತರವಾಗಿ ನಡೆಯುತ್ತಿರುವ ದೌರ್ಜನ್ಯಗಳು, ಗೋ

ರಕ್ಷಣೆಯ ಹೆಸರಿನಲ್ಲಿ ನಡೆಯುವ ದಾಳಿಗಳು, ಪ್ರೇಮಿಗಳ ದಿನ ಯುವಜನರ ಮೇಲೆ ನಡೆಸುವ ದಾಂಧಲೆಗಳು, ಅಲ್ಪ ಸಂಖ್ಯಾತರ ಮೇಲೆ ಅನಗತ್ಯವಾಗಿ ಆರೋಪ ಹೊರಿಸಿ ಪ್ರಕರಣ ದಾಖಲಿಸುವುದು, ಬಹಿರಂಗವಾಗಿಯೇ ಕೋಮುವಿದ್ವೇಷವನ್ನು ಹೆಚ್ಚಿಸುವ ಪ್ರಚೋದನಕಾರೀ ಭಾಷಣಗಳು ಇವೆಲ್ಲವೂ ನಿರಾತಂಕವಾಗಿ ನಡೆದೇ ಇದೆ.

ಕಂಧಮಾಲ್‌ನಲ್ಲಿ ಕ್ರಿಶ್ಚಿಯನ್ನರ ಮೇಲೆ ನಡೆದ ಕೋಮುಹಿಂಸೆಯನ್ನು ಸಂಘಪರಿವಾರ ಬೆಂಬಲಿಸಿದ ಕಾರಣದಿಂದ ಒರಿಸ್ಸಾದಲ್ಲಿ 2008ರಲ್ಲಿ ಇದ್ದಕ್ಕಿದ್ದಂತೆ ಕೋಮು ಗಲಭೆ ಭುಗಿಲೆದ್ದಿತು.

ವಿಷಯವೇನೆಂದರೆ ಬಿಜೆಪಿ ಸರ್ಕಾರಗಳು ಸ್ವಾಭಾವಿಕವಾಗಿಯೇ ಕೋಮುಹಿಂಸೆ ಮತ್ತು ಕೋಮು ಧ್ರುವೀಕರಣದ ಪರವಾಗಿಯೇ ಇರುತ್ತವೆ.

**2014ರ ಚುನಾವಣೆಯ ಘಳಿಗೆಯಲ್ಲಿ ನಡೆಯುತ್ತಿರುವ ಕೋಮುಧ್ರುವೀಕರಣ:**

ಬಿ.ಜೆ.ಪಿ. ಈಗ ಈ ಪ್ರಯೋಗಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ವಿಸ್ತರಿಸಲು ಹೊರಟಿದೆ. ಅಧಿಕಾರದ ಗದ್ದುಗೆ ಏರಿಯೇ ಬಿಡುವ ಆಸೆಯಲ್ಲಿ ಆರ್.ಎಸ್.ಎಸ್. ಮತ್ತು ಬಿ.ಜೆ.ಪಿ. ಕೋಮುಧ್ರುವೀಕರಣಕ್ಕೆ ಶತಪ್ರಯತ್ನ ಮಾಡುತ್ತಿವೆ.  ಗೃಹಸಚಿವಾಲಯದ ವರದಿಯಂತೆ 2012 ರಲ್ಲಿ 668 ಕೋಮು ಹಿಂಸೆಗಳು ದಾಖಲಾಗಿದ್ದರೆ 2013 ರಲ್ಲಿ ಅದು 823ಕ್ಕೆ ಏರಿದೆ. ಚುನಾವಣೆಯ ಸಂದರ್ಭದಲ್ಲಿ ಈ ರೀತಿಯ ಕೋಮುಹಿಂಸೆಗಳ ಹೆಚ್ಚಳ ಹೊಸತೇನಲ್ಲ ಎಂಬುದನ್ನು ದಾಖಲೆಗಳು ಸ್ಪಷ್ಟಪಡಿಸುತ್ತವೆ. ಯಾಕೆಂದರೆ 2004, ಮತ್ತು 2009 ರ ಚುನಾವಣೆಗಳ ಸಂದರ್ಭದಲ್ಲಿಯೂ ಇಂಥದೇ ಕೋಮುಹಿಂಸೆಯ ಪ್ರಯತ್ನಗಳು ಚುರುಕುಗೊಂಡಿದ್ದವು ಎಂದು ದಾಖಲೆಗಳು ತಿಳಿಸುತ್ತವೆ. ಚುನಾವಣೆಯ ಸಂದರ್ಭದಲ್ಲಿ ಕೋಮುಶಕ್ತಿಗಳು ಸಂಘಟಿತವಾಗುತ್ತವೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

ಕೋಮು ಹಿಂಸಾಚಾರದ ಚರಿತ್ರೆಯ ಪುಟಗಳಲ್ಲಿ 2013 ರ ಉತ್ತರಪ್ರದೇಶದಲ್ಲಿ ಕಳೆದ ವರ್ಷ ಮುಝಫರ್ ನಗರದಲ್ಲಿ ನಡೆದ ಭಯಾನಕ ಗಲಭೆಗಳೂ ಸೇರಿಕೊಂಡಂತೆ ಘಟಿಸಿದ ಘಟನಾವಳಿಗಳು ಪ್ರಮುಖವಾಗುತ್ತವೆ. ಅಕ್ಟೋಬರ್ 2013 ರ ವರೆಗಿನ ಕೋಮು ಹಿಂಸಾ ಘಟನೆಗಳಲ್ಲಿ ಸಂಭವಿಸಿದ 95ಕ್ಕೂ ಹೆಚ್ಚು ಸಾವುಗಳಲ್ಲಿ 60 ಸಾವು ಮುಝ್ಝರ್ ನಗರದಲ್ಲಿಯೇ ಸಂಭವಿಸಿದ್ದು. ಉತ್ತರ ಪ್ರದೇಶದ ಚರಿತ್ರೆಯಲ್ಲಿಯೇ ಮೊದಲ ಬಾರಿಗೆ ಉತ್ತರ ಪ್ರದೇಶದ ಪಶ್ಚಿಮ ಭಾಗದ ಹಳ್ಳಿಗಳಿಗೆ ಕೋಮು ದಳ್ಳುರಿ ಹಬ್ಬಿ 40 ಸಾವಿರಕ್ಕೂ ಹೆಚ್ಚುಜನ ಊರು ಮನೆ ತೊರೆಯಬೇಕಾಯಿತು. ಆರ್.ಎಸ್.ಎಸ್. ಬಿ.ಜೆ.ಪಿ. ಸಂಘಟನೆಗಳು ಈ ಕೋಮು ದಂಗೆಗೆ ಬೇಕಾದ ಆಯುಧಗಳು ಮತ್ತಿತರ ಸಂಘಟನಾ ನೆರವುಗಳನ್ನು ಸಕ್ರಿಯವಾಗಿ ಒದಗಿಸಿದವು. ರಾಜ್ಯ ಸರ್ಕಾರದ ನಿಸ್ಸತ್ವ ಮತ್ತು ನಿಷ್ಕ್ರಿಯತೆಯನ್ನು ಬೊಟ್ಟು ಮಾಡಿ ಹಿಂದುತ್ವ ಸಂಘಟನೆಗಳು ಈ ಗಲಭೆಯಲ್ಲಿ

ವಹಿಸಿದ ಪಾತ್ರವನ್ನು ಕಡೆಗಣಿಸಲಾಗುವುದಿಲ್ಲ. ತನ್ನ ಪಕ್ಷದ ನಾಲ್ಕು ಜನ ಶಾಸಕರು ಗಲಭೆಗೆ ಕಾರಣರೆಂದು ಬಂಧನಕ್ಕೊಳಗಾದ ಮೇಲೂ ಬಿ.ಜೆ.ಪಿ. ಈ ದಂಗೆಯ ರಾಜಕೀಯ ಲಾಭ ಗಳಿಸಲು ಚಕ್ಕನೆ ಮುಂದಾಯಿತು. ನರೇಂದ್ರ ಮೋದಿಯವರ ರ್‍ಯಾಲಿಯಲ್ಲಿ ಈ ನಾಲ್ವರನ್ನು ಆಗ್ರಾದಲ್ಲಿ ಸನ್ಮಾನಿಸಲಾಯಿತು. ಇಷ್ಟೆ ಸಾಲದೆಂಬಂತೆ ಇವರಲ್ಲಿ ಇಬ್ಬರಿಗೆ–ಕೈರಾನಾದಿಂದ ಹುಕುಮ್ ಸಿಂಗ್, ಮತ್ತು ಮುಝಫರ್ ನಗರದಿಂದ ಸಂಜೀವ್ ಬಲಿಯನ್ ರವರನ್ನು ಲೋಕಸಭಾ ಚುಣಾವಣೆಗೆ ಕಣಕ್ಕಿಳಿಸಲಾಗಿದೆ.

ಮೋದಿ ವಾರಣಾಸಿಯಿಂದ ಚುನಾವಣೆಗೆ ಸ್ಪರ್ಧಿಸುವ ನಿರ್ಧಾರವಾಗಿದೆ. ಅಭ್ಯರ್ಥಿಯೆಂದು ಘೋಷಣೆಯಾದ ತಕ್ಷಣ ನರೇಂದ್ರ ಮೋದಿ ಟ್ವೀಟ್ ಮಾಡಿದ್ದು– “ಪುಣ್ಯ ಭೂಮಿ ವಾರಣಾಸಿ ಮತ್ತು ಗಂಗಾಮಾತೆ ಮತ್ತು ವಿಶ್ವನಾಥನ ಆರ್ಶೀವಾದ” ಎಂದು.

ಡಿಸೆಂಬರ್‌ನಲ್ಲಿ ‘ವಿಜಯ ಸಂಕಲ್ಪ ಯಾತ್ರೆ’ಯನ್ನು ಕೈಗೊಂಡಾಗ ಶಿವನ ಬೃಹತ್ ಪಟದ ಹಿನ್ನೆಲೆಯಲ್ಲಿ “ಹರಹರ ಮೋದಿ” ಎಂಬ ಘೋಷಣೆಯೊಂದಿಗೆ ಮೋದಿಯ ಭಿತ್ತಿಚಿತ್ರ ಪ್ರಕಟವಾಗಿತ್ತು. ಸಂದೇಶದ ಗೂಡಾರ್ಥವನ್ನು ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿಯನ್ನು ಉರುಳಿಸುವಾಗ ಸಂಘಪರಿವಾರದ ಘೋಷಣೆಯಾಗಿದ್ದ ‘ಮುಂದಿನ ನಡೆ ಕಾಶಿಯ ಕಡೆ’ಯಲ್ಲಿ ಗುರುತಿಸಬಹುದು.

ಪಶ್ಚಿಮ ಉತ್ತರಪ್ರದೇಶದ ಮುಜಫರ್‌ನಗರದಲ್ಲಿ ನಡೆದ ರಕ್ತದೋಕುಳಿ ಮತ್ತು ಕೋಮು ಧೃವೀಕರಣವನ್ನು ಬಳಸಿಕೊಂಡು ರಾಜಕೀಯ ಪ್ರಯೋಜನ ಪಡೆಯಲು ಬಿಜೆಪಿ ನಿರೀಕ್ಷಿಸುತ್ತಿರುವಂತೆಯೇ, ಅತ್ತ ಪೂರ್ವ ಉತ್ತರಪ್ರದೇಶದ ವಾರಣಾಸಿಯಲ್ಲಿ ಮೋದಿಯ ಚುನಾವಣಾ ಉಮೇದುವಾರಿಕೆಯನ್ನು ಗಂಗೆ ಮತ್ತು ಕಾಶಿ ವಿಶ್ವನಾಥನಿಗೆ ಹೋಲಿಸಿ ರಾಜಕೀಯ ಲಾಭ ಪಡೆಯಲು ಬಿಜೆಪಿ ಬಯಸುತ್ತಿದೆ. ಅಯೋಧ್ಯೆಯಲ್ಲಿ 84 ಕೋಸಿ ಪರಿಕ್ರಮ ಮತ್ತು ಫೈಜಾಬಾದಿನಲ್ಲಿ ಕೋಮು ಗಲಭೆಗಳನ್ನು ಎಬ್ಬಿಸಲು ಸಂಘ ಪರಿವಾರವು ಯತ್ನಿಸುತ್ತಿದ್ದರೆ, ಬಿಜೆಪಿಯು ಅಯೋಧ್ಯೆ ಹೆಸರಿನಲ್ಲಿ ಕೋಮು ಜ್ವಾಲೆಯನ್ನು ಹರಡಲು ಯತ್ನಿಸಿತಾದರೂ ಹೆಚ್ಚು ಯಶಸ್ಸು ಸಿಗಲಿಲ್ಲ.

### ಅಲ್ಪಸಂಖ್ಯಾತರ ವಿರುದ್ಧ ಪಕ್ಷಪಾತ

ಗುಜರಾತಿನಲ್ಲಿ ದೊಂಬಿಯೇ ಇರಲಿಲ್ಲ ಎಂದು ಜಂಬ ಕೊಚ್ಚಿಕೊಂಡ ಹಸಿ ಸುಳ್ಳಿನಷ್ಟೇ ಶುದ್ಧಾಂಗ ಸುಳ್ಳು ಗುಜರಾತಿನಲ್ಲಿ ಮುಸ್ಲಿಮರ ಅಭಿವೃದ್ಧಿಯಾಗಿದೆ ಎನ್ನುವುದು. ಅಲ್ಪಸಂಖ್ಯಾತರ ವಿರುದ್ಧ ಮೋದಿಗೆ ಪಕ್ಷಪಾತದ ಧೋರಣೆ ಇಲ್ಲ ಎನ್ನುವುದಾದರೆ, ಚುನಾವಣೆಯಲ್ಲಿ ಎಷ್ಟು ಮುಸ್ಲಿಂ ಅಭ್ಯರ್ಥಿಗಳನ್ನು ನಿಲ್ಲಿಸಿದ್ದಾರೆ ಎಂದು ಅವರು ಹೇಳಲಿ. ಯಾವ ಮುಸ್ಲಿಮರನ್ನಾದರೂ ಅವರ ಸಚಿವ ಸಂಪುಟದಲ್ಲಿ ಸೇರಿಸಿಕೊಂಡಿದ್ದಾರೆಯೇ? 12 ವರ್ಷಗಳ ದೀರ್ಘ ಆಳ್ವಿಕೆಯಲ್ಲಿ ಒಬ್ಬ ಮುಸ್ಲಿಮನೂ

ಅವರ ಸಚಿವ ಸಂಪುಟದಲ್ಲಿ ಇರಲಿಲ್ಲ ಎಂದ ಮೇಲೆ ತಾನು ಮುಸ್ಲಿಂ ವಿರೋಧಿಯಲ್ಲ ಎಂದು ಮೋದಿ ಹೇಗೆ ಹೇಳುತ್ತಾರೆ? ಗುಜರಾತಿನಲ್ಲಿ ಶೇಕಡಾ 9.1ರಷ್ಟು ಮುಸ್ಲಿಮರಿರುವಾಗ ಮೋದಿಯ ಸರ್ಕಾರದಲ್ಲಾಗಲೀ ಅಥವಾ ರಾಜ್ಯ ವಿಧಾನಸಭೆಯಲ್ಲಾಗಲೀ ಮುಸ್ಲಿಮರ ಪಾತ್ರವಿಲ್ಲ ಏಕೆ?

## ಅಲ್ಪಸಂಖ್ಯಾತರ ಏಳಿಗೆಯಾಗಿದೆ ಎಂಬ ಬೊಗಳೆ

ಸಾಚಾರ್ ಸಮಿತಿಯ ಕಾರ್ಯದರ್ಶಿಯಾಗಿದ್ದ ಅಬು ಸಲೇಂ ಷರೀಫ್ ಎನ್‌ಎಸ್‌ಎಸ್‌ಓ ಹಾಗೂ ಎನ್‌ಸಿಎಇಆರ್‌ಗಳ ಅಂಕಿಅಂಶಗಳಿಂದ ತುಲನಾತ್ಮಕ ಮೌಲ್ಯಮಾಪನ ಮಾಡಿದ್ದಾರೆ. ಬೇರೆಲ್ಲಾ ಕೋಮಿನವರಿಗೆ ಹೋಲಿಸಿದರೆ ಗುಜರಾತಿನಲ್ಲಿ ಮುಸ್ಲಿಮರು ಬಹಳ ಹಿಂದುಳಿದಿದ್ದಾರೆ ಎಂದು ಅವರು ತೋರಿಸಿದ್ದಾರೆ. ಪಟ್ಟಣಗಳಲ್ಲಿ, ಮೇಲ್ಜಾತಿಯ ಹಿಂದುಗಳಿಗಿಂತ ಎಂಟು ಪಟ್ಟು ಹೆಚ್ಚು ಬಡವರು ಮುಸ್ಲಿಮರಲ್ಲಿ ಇದ್ದಾರೆ; ಹಿಂದೂಗಳಲ್ಲಿನ ಹಿಂದುಳಿದವರಿಗಿಂತ ಶೇಕಡಾ 50ಕ್ಕಿಂತಲೂ ಹೆಚ್ಚು ಬಡವರು ಮುಸ್ಲಿಮರು; ಎಸ್‌ಸಿ/ಎಸ್‌ಟಿ ಗಳಿಗಿಂತ ಕಡೆಯವರು ಅವರು. ಶೇಕಡಾ 60ರಷ್ಟು ಗುಜರಾತಿ ಮುಸ್ಲಿಮರು ಪಟ್ಟಣಗಳಲ್ಲಿ ವಾಸಿಸುತ್ತಿದ್ದಾರೆ; ಗುಜರಾತಿನಲ್ಲಿ ಸಾಮಾಜಿಕವಾಗಿ ಅತ್ಯಂತ ವಂಚಿತ ಗುಂಪು ಅವರಾಗಿದ್ದಾರೆ. ಗ್ರಾಮೀಣ ಬಡತನ ಗುಜರಾತಿ ಮುಸ್ಲಿಮರಲ್ಲಿ 200% ಕಿಂತಲೂ ಹೆಚ್ಚು. ಜನಸಂಖ್ಯಾ ಗಾತ್ರದ ಅನುಪಾತಕ್ಕೆ ಸರಿಯಾಗಿ ಮುಸ್ಲಿಮರು ಬ್ಯಾಂಕ್ ಖಾತೆಯನ್ನು ಹೊಂದಿದ್ದಾಗ್ಯೂ ಅವರಿಗೆ ದೊರೆಯುವ ಬ್ಯಾಂಕ್ ಸಾಲ ಮತ್ತಿತರ ಸೌಲಭ್ಯಗಳ ಸಂಖ್ಯೆಯನ್ನು ಗಮನಿಸಿದರೆ ಅವರ ವಿರುದ್ಧ ಎಷ್ಟರಮಟ್ಟಿನ ಸಾಂಸ್ಥಿಕ ಪಕ್ಷಪಾತ ಹಾಗೂ ಪೂರ್ವಾಗ್ರಹ ಇದೆ ಎಂಬುದು ಸಾಬೀತಾಗುತ್ತದೆ. ಬ್ಯಾಂಕ್‌ಗಳ ಒಟ್ಟು ಸಾಲಸೌಲಭ್ಯದಲ್ಲಿ ಕೇವಲ 2.6% ನಷ್ಟು ಮಾತ್ರ ಮುಸ್ಲಿಮರಿಗೆ ದೊರೆಯುತ್ತದೆ ಎಂದರೆ ಆರ್ಥಿಕ ಒಳಗೊಳ್ಳುವಿಕೆ ಎಷ್ಟು ಕಳಪೆಯಾಗಿದೆ ಎಂಬ ಕಟುಸತ್ಯ ಕಣ್ಣಿಗೆ ರಾಚುತ್ತದೆ.

ಪ್ರತಿಯೊಬ್ಬರಿಗೂ ಗುಣಮಟ್ಟದ ಬದುಕು, ಸಾಮಾಜಿಕ ಸಮನ್ವಯತೆಯ ಆಳ, ಸಮ್ಮಿಶ್ರ ನೆರೆಹೊರೆ ಮತ್ತು ಶಾಲಾ ಕೊಠಡಿಗಳು–ಇವುಗಳ ಮೂಲಕ ಸುಭದ್ರತೆ ಮತ್ತು ಸಮಗ್ರತೆಯನ್ನು ಅತ್ಯಂತ ಯಶಸ್ವಿಯಾಗಿ ಅಂದಾಜು ಮಾಡಬಹುದು. ಗುಜರಾತಿನ ಪಟ್ಟಣಗಳ ಶಾಲೆಗಳಲ್ಲಿ, ವಿಶೇಷವಾಗಿ ಬಹುಸಂಖ್ಯಾತರು ಪ್ರಾಬಲ್ಯ ಹೊಂದಿರುವ ಪ್ರದೇಶಗಳಲ್ಲಿ ಈ ಅಲ್ಪಸಂಖ್ಯಾತರ ಮಕ್ಕಳಿಗೆ ಪ್ರವೇಶ ಸಿಗುವುದು ಅಪರೂಪ. ಗುಜರಾತಿ ಪಟ್ಟಣಗಳಲ್ಲಿ ಪ್ರತ್ಯೇಕ ವಾಸದ ಬದುಕು ವಾಸ್ತವ; ನೆರೆಹೊರೆಯವರನ್ನು ಪ್ರತ್ಯೇಕಿಸಲು ಗಡಿಗಳನ್ನು ಗುರುತಿಸುವ ಪರಿಪಾಟ ಅಲ್ಲಿ ಇದೆ.

ಇವತ್ತಿಗೂ ಕೂಡ ಗುಜರಾತ್ ಸರ್ಕಾರವು ಎರಡು ಮೊಕದ್ದಮೆಗಳನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಅತ್ಯುಗ್ರವಾಗಿ ವಾದಿಸುತ್ತಿದೆ ಎಂದರೆ ಆಶ್ಚರ್ಯಪಡಬೇಕಾಗಿಲ್ಲ.

ಮೊದಲನೆಯ ಮೊಕದ್ದಮೆ: ಕೇಂದ್ರ ಸರ್ಕಾರವು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ನೀಡುವ ಎಸ್‌ಎಸ್‌ಎಲ್‌ಸಿ ಪೂರ್ವ ವಿದ್ಯಾರ್ಥಿ ವೇತನವನ್ನು ಗುಜರಾತ್ ಸರ್ಕಾರವು, ಅದು ತಾರತಮ್ಯ ಹಾಗೂ ಅಸಂವಿಧಾನಿಕ ಎಂಬ ನೆಪವೊಡ್ಡಿ ನಿಲ್ಲಿಸಿದೆ. ಸರ್ಕಾರದ ಈ ವಾದವನ್ನು ತಿರಸ್ಕರಿಸಿದ ಗುಜರಾತ್ ಉಚ್ಚ ನ್ಯಾಯಾಲಯವು ವಿದ್ಯಾರ್ಥಿವೇತನವನ್ನು ನೀಡಬೇಕೆಂದು ತೀರ್ಪಿತ್ತಿದೆ. ಮೋದಿ ಸರ್ಕಾರವು ಈ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದೆ. ಎರಡನೆಯ ಮೊಕದ್ದಮೆ: 2002ರ ಗುಜರಾತ್ ದೊಂಬಿಯಲ್ಲಿ ನಾಶವಾದ ಅಲ್ಪಸಂಖ್ಯಾತರ ಧಾರ್ಮಿಕ ಕಟ್ಟಡಗಳನ್ನು ಪುನರ್ನಿರ್ಮಾಣ ಮಾಡಲು ಸಹಾಯ ನೀಡುವ ಕುರಿತಾಗಿದೆ. ಈ ವಿಷಯದಲ್ಲಿ ಕೂಡ, ಇಂತಹ ಕಾರಣಗಳಿಗಾಗಿ ಸಾರ್ವಜನಿಕ ಹಣವನ್ನು ವೆಚ್ಚ ಮಾಡುವುದು ಅಸಂವಿಧಾನಿಕ ಎಂದು ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಮೋದಿ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದೆ.

## 2002ರ ನಂತರ: ಬುಡಮೇಲಾದ ನ್ಯಾಯದಾನ

ಗುಜರಾತಿನಲ್ಲಿ ದೊಂಬಿಗಳೇ ನಡೆದಿಲ್ಲ ಎಂಬ ಅಸತ್ಯ ಮಾತ್ರವಲ್ಲ. ಸಂತ್ರಸ್ತರ ಕುಟುಂಬಗಳ ಪಾಡೇನು? ಅವರ ನ್ಯಾಯದ ಪ್ರಶ್ನೆ ಹೇಗೆ? 2002ರ ನಂತರದಲ್ಲಿ ಆಂತರಿಕವಾಗಿ ಪಲ್ಲಟಗೊಂಡ 70ಕ್ಕೂ ಹೆಚ್ಚು ಕಾಲೋನಿಗಳ ಸುಮಾರು 5000 ಕುಟುಂಬಗಳ ಪುನರ್ವಸತಿಯ ಬಗ್ಗೆ ಮೋದಿಯ ಸರ್ಕಾರ ತಾನು ಇಷ್ಟೇ ಮಾಡೋದು ಎಂಬ ಧೋರಣೆ ತಳೆದಿದೆ. ರಾಜ್ಯ ಸರ್ಕಾರದ ಹಗೆತನದ ಧೋರಣೆಯ ನಡುವೆಯೂ, ಕೆಲವು ಸಂಘಟನೆಗಳು ಮತ್ತು ಟ್ರಸ್ಟುಗಳು ಸಾಕಷ್ಟು ಕಷ್ಟಗಳನ್ನು ಅನುಭವಿಸಿಯೂ ಅವರಿಗೆ ಅನುಕೂಲತೆಗಳನ್ನು ಒದಗಿಸಲು ಹೆಣಗಾಡಿದವು. ರಾಜ್ಯ ಸರ್ಕಾರ ನಡೆಸುತ್ತಿದ್ದ ಕೆಲವು ನಿರಾಶ್ರಿತರ ಕ್ಯಾಂಪುಗಳನ್ನು "ಮಕ್ಕಳನ್ನು ಉತ್ಪಾದಿಸುವ ಕಾರ್ಖಾನೆಗಳನ್ನು ಸರ್ಕಾರ ನಡೆಸಲು ಸಾಧ್ಯವಿಲ್ಲ" ಎಂಬ ಅವಮಾನಕರ ಕಾರಣ ನೀಡಿ ಮುಚ್ಚಲಾಯಿತು. ಮುಸ್ಲಿಮರು ಹೆಚ್ಚು ಮಕ್ಕಳನ್ನು ಹೆರುತ್ತಾರೆ, ಅದು 'ಹಿಂದೂರಾಷ್ಟ್ರದ ಜನಸಂಖ್ಯೆಗೆ ದೊಡ್ಡ ಅಪಾಯ' ಎಂಬ ತುಚ್ಛ ಮಾತುಗಳನ್ನೂ ಆಡಲಾಯಿತು.

2002 ರ ಗೋದ್ರೋತ್ತರ ಗುಜರಾತಿನಲ್ಲಿ ನ್ಯಾಯ ವ್ಯವಸ್ಥೆಗೆ ಮಸಿ ಬಳಿಯುವ ಎಲ್ಲ ಕೆಲಸಗಳನ್ನೂ ಮೋದಿ ಸರ್ಕಾರ ಮಾಡಿತು. ಪ್ರಕರಣಗಳ ತನಿಖೆಯನ್ನು ಬುಡಮೇಲು ಮಾಡಿ, ಕಟ್ಟಾ ಹಿಂದುತ್ವವಾದೀ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳನ್ನೇ ನೇಮಕಮಾಡಿ ಗಲಭೆಗಳಲ್ಲಿ ಬಲಿಪಶುಗಳಾದವರಿಗೆ ನ್ಯಾಯದ ದಾರಿ ಎಂದಿಗೂ ಸಿಗದಂತೆ ನೋಡಿಕೊಳ್ಳಲಾಯಿತು. ಸರ್ವೋಚ್ಚ ನ್ಯಾಯಾಲಯ ಮಧ್ಯ ಪ್ರವೇಶಿಸಿ ಈ ರೀತಿಯ ನ್ಯಾಯದ ಬುಡಮೇಲು ಕೃತ್ಯಕ್ಕೆ ಸ್ವಲ್ಪ ತಡೆಯೊಡ್ಡಿತಾದರೂ ನಡೆದ ಭೀಕರ ಕ್ರೌರ್ಯದ ಎದುರು ಅದೂ ಅತ್ಯಲ್ಪ ಎನಿಸಿಬಿಟ್ಟಿತು.

ಅಲ್ಪ ಸಂಖ್ಯಾತ ಸಮುದಾಯದವರ ವಿರುದ್ಧ ನಡೆದ 4000 ಪ್ರಕರಣಗಳನ್ನು ಮೋದಿಯ ಗುಜರಾತ್ ಸರ್ಕಾರ ಖುಲಾಸೆ ಮಾಡಿದೆ. ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇಲಷ್ಟೇ ಅವುಗಳಲ್ಲಿ ಅರ್ಧದಷ್ಟನ್ನು ಪುನರಾರಂಭಿಸಲಾಯಿತು. 14 ಜನ ಜೀವ ಭಯದಿಂದ ಜೀವ ಉಳಿಸಿಕೊಳ್ಳಲು ಅವಿತಿಟ್ಟುಕೊಂಡ ಬೆಸ್ಟ್ ಬೇಕರಿಯನ್ನು ಸುತ್ತುವರೆದು ಸಜೀವ ದಹನ ಮಾಡಲಾಗಿತ್ತು. ಮೋದಿ ಸರ್ಕಾರದ ಒತ್ತಡದಿಂದಾಗಿ ಪ್ರತ್ಯಕ್ಷ ಸಾಕ್ಷಿಗಳೆಲ್ಲರೂ ತಮ್ಮ ಹೇಳಿಕೆಗಳನ್ನು ಬದಲಿಸುವಂತಾಯಿತು. ಅಪರಾಧಿಗಳೆಲ್ಲರೂ ಬಿಡುಗಡೆಯಾದರು. ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿ ಮರುವಿಚಾರಣೆಗೆ ಆದೇಶಿಸಿದೆ. ಮುಖ್ಯನ್ಯಾಯಾಧಿಶರೇ 'ಗುಜರಾತ್ ಸರ್ಕಾರದ ಮೆಲೆ ನಂಬಿಕೆ ಇಲ್ಲ' ಎಂದು ಹೇಳಿದ್ದಾರೆ. ಮರುವಿಚಾರಣೆ ನಡೆದು ಕೆಲವರಿಗೆ ಶಿಕ್ಷೆಯಾಗಿದೆ. ಇನ್ನು ಕೆಲವರು ಹಿಂದಿನ ವಿಚಾರಣೆಯಲ್ಲಿನ ಪ್ರಜ್ಞಾಪೂರ್ವಕ ದೋಷಗಳಿಂದಾಗಿ ಬಿಡುಗಡೆಯಾಗಿದ್ದಾರೆ.

ಮೋದಿಯನ್ನೂ ಒಳಗೊಂಡಂತೆ ಅಪರಾಧಿಗಳಿಗೆ ಶಿಕ್ಷೆಯಾಗದೇ ಮೋದಿಯ ಬೆಂಬಲಿಗರು ಪ್ರತಿಪಾದಿಸುವಂತೆ ಕರಾಳ 2002ರ ಘಟನೆಗಳನ್ನು ಮರೆತು ಬಿಡಲು ಯಾರಿಗೂ ಸಾಧ್ಯವಿಲ್ಲ.

**ನಿಸ್ಸಂದಿಗ್ಧ ಶುಭ್ರತೆಯ ಪ್ರದರ್ಶನ-ಕ್ಷಮಾಯಾಚನೆ ಇಲ್ಲ:**

2002 ರ ಗುಜರಾತ್ ನರಮೇಧದ ಸಂದರ್ಭದಲ್ಲಿ ಮೋದಿ ನೇರವಾಗಿ ಭಾಗವಹಿಸಿರುವ ಬಗ್ಗೆ ವಿಚಾರಣೆಗೊಳಪಡಿಸಬಹುದದ ಸಾಕ್ಷ್ಯಾಧಾರಗಳಿಲ್ಲ ಎಂದು ವಿಶೇಷ ವಿಚಾರಣಾ ದಳ 'ಕ್ಲೀನ್ ಚಿಟ್' ನೀಡಿದ್ದನ್ನು ಮತ್ತು ನಂತರ ಗುಜರಾತಿನ ನ್ಯಾಯಾಲಯ ಅದನ್ನು ಎತ್ತಿ ಹಿಡಿದದ್ದನ್ನು ಮೋದಿ ಮತ್ತು ಬಿ.ಜೆ.ಪಿ ಪ್ರಚಾರ ಮಾಡಿಕೊಳ್ಳುತ್ತಿದ್ದಾರೆ. ದಂಗೆಯಲ್ಲಿ ಹತ್ಯೆಗೀಡಾದ ಕಾಂಗ್ರೆಸ್ ನಾಯಕ ಎಹಸಾನ್ ಝೂಫ್ರೀ ಯವರ ಹೆಂಡತಿ ಜಾಕಿಯ ಝೂಫ್ರಿ ಬಹಳ ಧೈರ್ಯದಿಂದ ಈ ತೀರ್ಪಿನ ವಿರುದ್ಧ ಗುಜರಾತ್ ಹೈಕೋರ್ಟ್‌ನಲ್ಲಿ ದಾವೆ ಹಾಕಿದ್ದಾರೆ. ಮೊಕದ್ದಮೆ ಮುಂದುವರೆಯುತ್ತದೆ. ಆದರೆ ಗುಜರಾತ್ ಹತ್ಯೆಗೆ ಸಂಭಂಧಿಸಿದಂತೆ ಹತ್ಯಾಕಾಂಡದ ಸಂದರ್ಭದಲ್ಲಿ ಅದನ್ನು ತಡೆಯಲು ಮುಂದಾಗದೆ, ಬಲಿಯಾದವರ ನೆರವಿಗೆ ಧಾವಿಸದೇ ಅಲಕ್ಷ್ಯ ತೋರಿಸಿದ ಗುಜರಾತ್ ಸರ್ಕಾರದ ಬಗ್ಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮಾಡಿದ ಆರೋಪದಿಂದ ಅವರು ಮುಕ್ತರಾಗುವುದು ಯಾವುದೇ ಕಾರಣಕ್ಕೂ ಸಾಧ್ಯವಿಲ್ಲ. 2002 ರ ಈ ಹತ್ಯಾಕಾಂಡದ ಬಗ್ಗೆ ಪಶ್ಚಾತ್ತಾಪದ ಮಾತಾಗಲಿ, ಕ್ಷಮಾಯಾಚನೆಯ ಶಬ್ಧವಾಗಲಿ ಮೋದಿಯ ಬಾಯಿಂದ ಬಂದಿಲ್ಲ. ಬದಲಿಗೆ ನಾಯಿಯೊಂದು ಅಪಘಾತಕ್ಕೆ ಸಿಕ್ಕಿದರೂ ನನಗೆ ಬೇಸರವಗುತ್ತದೆ ಎಂಬ ಹಗುರ ಮಾತುಗಳನ್ನು ಮೋದಿ ಅಲ್ಲಿ ಸಂತ್ರಸ್ತರಿಗೆ ಆಡಿದ್ದಾರೆ. ಈಗಲೂ ಆ ಹತ್ಯಾಕಾಂಡದಲ್ಲಿ ಪಾಲ್ಗೊಂಡ ಸಚಿವರನ್ನು ನಿರಪರಾಧಿಗಳೆಂದು ತನ್ನ ಆಪ್ತವಲಯದವರನ್ನಾಗಿ ಮೋದಿ ಪರಿಗಣಿಸುತ್ತಾರೆ. ನರೋದ ಪಾಟಿಯಾದ ನರಮೇಧದಲ್ಲಿ ಭಾಗಿಯಾದ ಮಾಯಾ

ಕೊಡ್ನಾನಿ ಗೆ ಅವರ ಕುಕೃತ್ಯಕ್ಕೆ ಬಹುಮಾನವೋ ಎಂಬಂತೆ ಆ ಗಲಭೆಯ ನಂತರ ಸಚಿವ ಸ್ಥಾನವನ್ನು ಕೊಡಲಾಯಿತು. ನ್ಯಾಯಾಲಯದ ಮಧ್ಯಪ್ರವೇಶದಿಂದ ಅವರಿಗೀಗ ಜೀವಾವಧಿ ಶಿಕ್ಷೆಯಾಗಿ ಜೈಲಿನಲ್ಲಿದ್ದಾರೆ.

**ಹಿಂದುತ್ವದ ಹೆಸರಿನಲ್ಲಿ ಭಯೋತ್ಪಾದನೆ :**

ಭಯೋತ್ಪಾದನೆ ಮತ್ತು ಅದಕ್ಕೆ ಸಹಕಾರ ನೀಡುವುದು ಭಾರತದ ಭದ್ರತೆಗೆ ಅಪಾಯಕಾರಿ. ಆದ್ದರಿಂದ ಪ್ರತಿಯೊಬ್ಬ ಭಾರತೀಯ ಪ್ರಜೆಯ ಪ್ರಥಮ ಕರ್ತವ್ಯ ಭಯೋತ್ಪಾದನೆ ಮತ್ತು ಅದಕ್ಕೆ ಬೆಂಬಲ ನೀಡುವುದರ ವಿರುದ್ಧ ಕೆಲಸ ಮಾಡುವುದು. ಭಯೋತ್ಪಾದನಾ ಕೃತ್ಯದಲ್ಲಿ ತೊಡಗಿರುವವರು ಯಾವುದೇ ಗುಂಪಿಗೆ ಸೇರಿದ್ದರೂ ಯಾವುದೇ ಧರ್ಮವನ್ನು ಕಾಪಾಡಲು ಎಂದು ಹೇಳಿಕೊಂಡರೂ ಅವರನ್ನು ಗುರುತಿಸಿ ಶಿಕ್ಷೆಗೆ ಒಳಪಡಿಸಬೇಕು. ಭಯೋತ್ಪಾದನೆಗೆ ಯಾವುದೇ ಧರ್ಮವಿರದಿದ್ದರೂ ಸಾಮಾನ್ಯವಾಗಿ ಭಯೋತ್ಪಾದನಾ ಗುಂಪುಗಳು ಧರ್ಮದ ಹೆಸರಿನಲ್ಲಿಯೇ ಕಾರ್ಯನಿರ್ವಹಿಸುತ್ತವೆ. ಹಾಗೆಯೇ ವಿವಿಧ ದೇಶಗಳಲ್ಲಿ ಮುಸ್ಲಿಂ ಮೂಲಭೂತವಾದೀ ಸಂಘಟನೆಗಳು ಮುಗ್ಧ ಜನರ ವಿರುದ್ಧ ಭಯೋತ್ಪಾದನಾ ಚಟುವಟಿಕೆಗಳಿಗೆ ಬೆಂಬಲ ನೀಡಿ ಸಹಕರಿಸುತ್ತಿರುವುದೂ ಅಷ್ಟೇ ನಿಜ. ಈ ಭಯೋತ್ಪಾದನಾ ಗುಂಪುಗಳು ಮತ್ತು ಅವರ ಮುಖಂಡರುಗಳು ಬಹು ಹಿಂದಿನಕಾಲದಿಂದಲೂ ಅಮೇರಿಕಾ ಸರ್ಕಾರದ ವಿವಿಧ ಸಂಘ ಸಂಸ್ಥೆಗಳು ಮತ್ತು ಸಿ.ಐ.ಎ. ಗಳ ಬೆಂಬಲ ಹೊಂದಿದ್ದಾವಲ್ಲದೇ ಹಿಂದಿನ ಸೋವಿಯತ್ ಯೂನಿಯನ್ ನ ಬೆಂಬಲಿಗರೆನಿಸಿದವರ ಮೇಲೆ ಅಮೇರಿಕಾ ನಡೆಸಿದ ಸಂಘರ್ಷಗಳಿಗೆ ಬೆಂಬಲವಾಗಿ ನಿಂತಿದ್ದವು. ಇಸ್ಲಾಮಿಕ್ ದೇಶಗಳೂ ಸೇರಿದಂತೆ ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಮೌಲ್ಯಗಳನ್ನು ಗೌರವಿಸುವ ವಿಶ್ವದ ಎಲ್ಲ ಜನರೂ ಇದನ್ನು ಖಂಡಿಸಿದ್ದಾರೆ.

2011 ರ ಸೆಪ್ಟೆಂಬರ್ 11 ರ ನಂತರ ಅಮೇರಿಕಾ ವಿಶ್ವಮಟ್ಟದಲ್ಲಿ ಇಸ್ಲಾಂ ಬಗ್ಗೆ ತೀವ್ರ ಅಪಪ್ರಚಾರ ಕೈಗೊಂಡಿತಲ್ಲದೇ ಎಲ್ಲ ಮುಸಲ್ಮಾನರಿಗೆ ಭಯೋತ್ಪಾದಕರೆಂಬ ಪಟ್ಟ ಕಟ್ಟುವ ಪ್ರಯತ್ನ ನಡೆಸಿತು. ಭಾರತದಲ್ಲಿ ಬಿ.ಜೆ.ಪಿ. ಈ ಅಪಮಾರ್ಗದ ಪ್ರಚಾರಕ್ಕೆ ಪ್ರತಿಧ್ವನಿ ಕೊಟ್ಟಿತು. ನವೆಂಬರ್ 26, 2008 ರಂದು ಮುಂಬೈನಲ್ಲಿ ಯೋಜಿತವಾಗಿ ಪಾಕಿಸ್ತಾನ ನಡೆಸಿದ ಧಾಳಿ ಇದಕ್ಕೆ ಪುಷ್ಟಿ ನೀಡಿತು. ಆದರೆ ಭಯೋತ್ಪಾದನೆಯ ವಿರುದ್ಧ ತಾನು ಎಂಬ ಬಿಜೆಪಿಯ ಠಕ್ಕುತನ, ಹಿಂದುತ್ವದ ಹೆಸರಿನಲ್ಲಿ ಪ್ರತಿಜ್ಞೆ ಮಾಡುವ ಪ್ರಚಾರಕರ ಬೆಂಬಲಿಸುವುದರ ಮೂಲಕ ಬಯಲಾಗಿದೆ.

ಆರ್.ಎಸ್.ಎಸ್. ನ ಮುಸ್ಲಿಂ ವಿರೋದೀ ಅಜೆಂಡಾವನ್ನು ಅದರ ತೀವ್ರ ಗಂಭೀರತೆಗೆ ಅದರ ಪರಿವಾರಗಳಾದ ವಿ.ಎಚ್.ಪಿ., ಭಜರಂಗದಳ, ದುರ್ಗಾವಾಹಿನಿ ಮುಂತಾದ ಹಿಂದುತ್ವದ ಹೆಸರಿನಲ್ಲಿ ಪ್ರಮಾಣ ಮಾಡುವ ಸಂತಾನಗಳಾಗಿ ಮುಂದುವರೆಸಿವೆ.

ಮುಸ್ಲಿಮರನ್ನೇ ಗುರಿ ಇರಿಸಿಕೊಂಡು ಮೆಕ್ಕಾ ಮಸೀದಿ, ಮಾಲೆಗಾಂವ್, ಅಜಮೀರ್ ಷರೀಫ್, ಸಂಜೋತಾ ಎಕ್ಸಪ್ರೆಸ್‌ಗಳ ಮೇಲೆ ನಡೆಸಿದ ಬಾಂಬ್ ಸ್ಪೋಟಗಳನ್ನು ಈ ಹಿಂದುತ್ವ ಭಯೋತ್ಪಾದಕ ಗುಂಪುಗಳು ಯೋಜಿಸಿ ಕಾರ್ಯರೂಪಕ್ಕೆ ಇಳಿಸಿದವು. ಬಿ.ಜೆ.ಪಿ. ಮುಖಂಡರು ಇವರನ್ನು ಸಮರ್ಥಿಸಿಕೊಂಡು ಜೈಲಿಗೂ ಭೇಟಿ ನೀಡಿದ್ದಾರೆ. ಕೇಂದ್ರ ಸರ್ಕಾರ ಭಯೋತ್ಪಾದಕರ ಬಗ್ಗೆ ಲಘು ಧೋರಣೆ ತಳೆದಿದೆ ಎಂದು ದಣಿವರಿಯದೇ ಬೊಬ್ಬೆ ಹಾಕುತ್ತಿರುವ ಮೋದಿ ಈ ಜನರ ಬಗ್ಗೆ ಚಕಾರವೆತ್ತಿಲ್ಲ.

**ಜೈಲು ಸೇರುವ ಮುಗ್ಧ ಮುಸ್ಲಿಮರು :**

ಭಯೋತ್ಪಾದನೆಯನ್ನು ಮಟ್ಟ ಹಾಕುವ ನೆಪದಲ್ಲಿ ಹಲವಾರು ಮುಗ್ಧ ಮುಸ್ಲಿಂ ಯುವಕರನ್ನು ಅವರು ಮುಸ್ಲಿಮರು ಎಂಬ ಒಂದೇ ಕಾರಣಕ್ಕೆ ಬಲಿಪಶುಗಳನ್ನಾಗಿ ಮಾಡಲಾಗುತ್ತದೆ. ಮಾಲೆಗಾಂವ್, ಮೆಕ್ಕಾ ಮಸೀದಿ ಮತ್ತಿತರ ಪ್ರಕರಣಗಳಲ್ಲಿ ಹಿಂದೂ ಭಯೋತ್ಪಾದಕ ಗುಂಪುಗಳು ನಡೆಸಿದ್ದಾದರೂ ಪ್ರಾರಂಭದಲ್ಲಿ ಮುಸ್ಲಿಂ ಯುವಕರನ್ನು ಬಂಧಿಸಿ ಕೆಲವೊಮ್ಮೆ 10–15 ವರ್ಷಗಳ ಕಾಲ ವಿಚಾರಣಾಧೀನ ಖೈದಿಗಳನ್ನಾಗಿ ಇರಿಸಲಾಗಿತ್ತು. ಆದರೆ ಕೊನೆಯಲ್ಲಿ ನಿರಪರಾಧಿಗಳೆಂದು ನ್ಯಾಯಾಲಯದಲ್ಲಿ ಸಾಬೀತಾಗಿ ಬಿಡುಗಡೆಯಾದರು. ನಿಜವೆಂದರೆ ಇಂತಹ ಹಲವಾರು ಪ್ರಕರಣಗಳಲ್ಲಿ ಮುಸ್ಲಿಂ ಯುವಕರನ್ನು ಸುಳ್ಳು ಅಪವಾದ ಹೊರಿಸಿ ಬಂಧಿಸಲಾಗಿತ್ತೆಂಬುದು ಹೊರಬಿದ್ದಿದೆ. ಇಂಥಹ ಗುರುತರವಾದ ಪ್ರಮಾದ ದ ಬಗ್ಗೆ ಕಾಂಗ್ರೆಸ್ ಮತ್ತು ಬಿ.ಜೆ.ಪಿ ಪಕ್ಷಗಳು ತುಟಿಬಿಚ್ಚಿಲ್ಲ. ಆದರೆ ಸಿ.ಪಿ.ಐ.(ಎಂ) ಪಕ್ಷ ನಿರಂತರವಾಗಿ ಈ ಯುವಕರ ಪರವಾಗಿ ಸಂಸತ್ತಿನ ಒಳಗೆ ಮತ್ತು ಹೊರಗೆ ಧ್ವನಿ ಎತ್ತಿದೆ, ಮತ್ತು ರಾಷ್ಟ್ರಾಧ್ಯಕ್ಷರವರೆಗೂ ಪ್ರಕರಣವನ್ನು ಒಯ್ದಿದೆ. ಕೊನೆಗೊಮ್ಮೆ ಅನಿವಾರ್ಯವಾಗಿ ಗೃಹ ಮಂತ್ರಿಗಳು ಇಂತಹ ಪ್ರಕರಣಗಳ ಸಂತ್ರಸ್ತರಿಗೆ ಪರಿಹಾರ ಮತ್ತು ಪುನರ್ವಸತಿಯನ್ನು ಕಲ್ಪಿಸಲಾಗುತ್ತದೆ ಎಂದು ಸಂಸತ್ತಿನಲ್ಲಿ ಹೇಳಿಕೆ ನೀಡಿದರಾದರೂ ಇದುವರೆಗೂ ಅದು ಕಾರ್ಯರೂಪಕ್ಕೆ ಬಂದಿಲ್ಲ. ಹೀಗೆ ಮುಗ್ಧ ಜನರ ತೊಂದರೆ ಅನುಭವಿಸುತ್ತಿದ್ದು ಅವರ ಬದುಕು ನಾಶವಾಗಿದೆ.

ಕಾಂಗ್ರೆಸ್ ಇಂಥಹ ಪ್ರಮಾದಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳದೇ ಅನ್ಯಾಯ ಮಾಡುತ್ತಿದ್ದರೆ ಬಿ.ಜೆ.ಪಿ. ಇನ್ನಷ್ಟು ಮುಂದೆ ಹೋಗುತ್ತಿದೆ. ಅವರು ಇಂಥಹ ಬಂಧನಗಳನ್ನು ನ್ಯಾಯ ಸಮ್ಮತವೆನ್ನುತ್ತಾರಷ್ಟೇ ಅಲ್ಲ ನಕಲೀ ಎನ್‌ಕೌಂಟರ್‌ಗಳನ್ನು ಸಮರ್ಥಿಸಿಕೊಳ್ಳುತ್ತಾರೆ. ಬಿ.ಜೆ.ಪಿ. ಗೆ ಮಾದರಿಯಾದ ಮೋದಿ ಸರ್ಕಾರ, ತನ್ನ ಅಧಿಕಾರಿಗಳು ನಕಲೀ ಎನ್‌ಕೌಂಟರ್‌ಗಳಲ್ಲಿ ಜನರನ್ನು ಕೊಂದಿದ್ದನ್ನು ಸಮರ್ಥಿಸಿಕೊಳ್ಳುತ್ತಿದೆ.

**ಎನ್‌ಕೌಂಟರ್ ಕೊಲೆಗಳ ಆಡಳಿತ :**

ಮೋದಿ ಸರ್ಕಾರದ ಆಡಳಿತದಲ್ಲಿ ನಡೆದ ದೊಡ್ಡ ಮಟ್ಟದ ನಕಲೀ ಎನ್‌ಕೌಂಟರ್

ಗಳಲ್ಲಿ ಹಲವಾರು ಜನ ಮುಸ್ಲಿಮರು ಹತರಾಗಿದ್ದಾರೆ. ಮೋದಿಯ ಪರಮಾಪ್ತ ಮತ್ತು ಮಾಜಿ ಗೃಹ ಸಚಿವ ಅಮಿತ್ ಷಾ ಸೇರಿದಂತೆ ಹಲವಾರು ಉನ್ನತ ಮಟ್ಟದ ಅಧಿಕಾರಿಗಳು ಹಲವು ಪ್ರಕರಣಗಳಲ್ಲಿ ಮುಖ್ಯ ಅಪರಾಧಿಗಳಾಗಿದ್ದಾರೆ. ಸಂಚುಗಾರ, ಕ್ರಿಮಿನಲ್ ಎಂಬ ಆರೋಪ ಹೊತ್ತು ಈಗ ಜಾಮೀನಿನ ಮೇಲೆ ಹೊರಬಂದಿರುವ ಇದೇ ಅಮಿತ್ ಷಾಗೆ ಬಿ.ಜೆ.ಪಿ.ಯ ಉತ್ತರ ಪ್ರದೇಶದ ಚುನಾವಣಾ ಹೊಣೆ ನೀಡಲಾಗಿದೆ!

ಈ ರೀತಿಯ 22 ನಕಲಿ ಎನ್‌ಕೌಂಟರ್ ಗಳ ವಿರುದ್ದ ಜನವರಿ 2012 ರಲ್ಲಿ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ. ಪ್ರಕರಣವನ್ನು ಅಂಗೀಕರಿಸಿದ ಕೋರ್ಟ್ ಮನವಿಯಲ್ಲಿ ನಮೂದಿಸಿರುವ ಎನ್‌ಕೌಂಟರ್‌ಗಳ ತನಿಖೆಗೆ ನಿವೃತ್ತ ನ್ಯಾಯಾಧೀಶರಾದ ಜಸ್ಟೀಸ್ ಎಚ್.ಎಸ್.ಬೇಡಿಯವರ ನೇತೃತ್ವದಲ್ಲಿ ಪರಿಶೀಲನಾ ಮಂಡಲಿಯನ್ನು ನೇಮಿಸಿದೆ. ಆಸ್ಟೀಸ್ ಆಲಮ್ ಮತ್ತು ರಂಜನಾ ಪ್ರಕಾಶ್ ರವರು ಈ ಬಗ್ಗೆ ಹೀಗೆ ಪ್ರತಿಕ್ರಿಯಿಸಿದ್ದಾರೆ. "ಈ ನ್ಯಾಯಾಲಯದಲ್ಲಿ ಹೀಗೆ ಎರಡಕ್ಕೂ ಹೆಚ್ಚು ಬಾರಿ ನಡೆದಿದೆ. ರಾಜ್ಯ ಸರ್ಕಾರ ಪ್ರಾರಂಭದಲ್ಲಿ ಭಾವಾವೇಶದಲ್ಲಿ ಪ್ರಬಲವಾಗಿ ನಿರಾಕರಿಸುತ್ತದೆ. ವಿಷಯದ ಮೂಲಕ್ಕೆ ಸ್ವಲ್ಪ ಹೋದರೂ ಸತ್ಯ ಆಚೆಗೆ ಬರುತ್ತದೆ. ಆಗ ರಾಜ್ಯ ಸರ್ಕಾರ ಅದು ನಕಲಿ ಎನ್‌ಕೌಂಟರ್ ಎಂಬುದನ್ನು ಒಪ್ಪಿಕೊಳ್ಳುತ್ತದೆ."

ನ್ಯಾಯಾಲಯ ಪ್ರಸ್ತಾಪಿಸಿದ್ದು ಶೊರಾಬುದ್ದೀನ್ ಮತ್ತು ಪ್ರಜಾಪತಿ ಪ್ರಕರಣವನ್ನು. ಶೋರಾಬುದ್ದೀನ್‌ರ ಪತ್ನಿ ಕೌಸರ್ ಬೀ ಯೂ ಸೇರಿದಂತೆ ಈ ಮೂವರನ್ನೂ ಅಂದಿನ ಉನ್ನತ ಅಧಿಕಾರಿಯಾಗಿದ್ದ ವಂಝಾರ ಮತ್ತು ಇತರ ಪೋಲಿಸ್ ಅಧಿಕಾರಿಗಳು ಅತ್ಯಂತ ಘೋರವಾಗಿ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿದ್ದರು. ಶೊರಾಬುದ್ದೀನ್ ಬಿ.ಜೆ.ಪಿ. ಯ ಧನದಾತರನ್ನು ಮಾರ್ಬಲ್ ವ್ಯವಹಾರದಲ್ಲಿ ಹಣಕ್ಕಾಗಿ ಬ್ಲಾಕ್ ಮೇಲ್ ಮಾಡುತ್ತಿದ್ದ ಎಂಬ ಕಾರಣಕ್ಕಾಗಿ ನಿವಾರಿಸಿಕೊಳ್ಳಲಾಯಿತು. ಇದರಲ್ಲಿ ಉಳಿದ ಅಪರಾಧಿಗಳೆಂದರೆ ಅಮಿತ್ ಷಾ ಮತ್ತು ರಾಜಸ್ತಾನ ಸರ್ಕಾರದ ಮಾಜಿ ಗೃಹ ಮಂತ್ರಿ ಗುಲಾಬ್ ಚಂದ್ ಕಟಾರಿಯಾ.

ಇಷ್ರತ್ ಜಹಾನ್ ಮತ್ತು ಮೂವರ ಎನ್‌ಕೌಂಟರ್ ಕೊಲೆಯ ಭಯಾನಕ ವಿವರಗಳು ಹೊರಬರುತ್ತಿವೆ. ಅವರ ಕಸ್ಟಡಿಯಲ್ಲಿದ್ದ ಈ ನಾಲ್ವರನ್ನು ಅತ್ಯಂತ ಅಮಾನವೀಯವಾಗಿ ಎನ್‌ಕೌಂಟರ್ ಮಾಡಲಾಗಿದೆ ಎಂದು ಚಾರ್ಜ್‌ಶೀಟಿನಲ್ಲಿ ಸಿ.ಬಿ.ಐ. ಹೇಳಿದೆ. ಉನ್ನತ ಮಟ್ಟದ ಪೋಲೀಸ್ ಅಧಿಕಾರಿಗಳಿಗೆ ಇದು ಸತ್ಯವಲ್ಲ ವೆಂದು ಗೊತ್ತಿದ್ದರೂ, ಮೋದಿಯ ವಿರುದ್ಧ ಭಯೋತ್ಪಾದಕರ ಅಪಾಯವಿದೆ ಎಂದು ಬಿಂಬಿಸುವ ಉನ್ನತ ಮಟ್ಟದ ಸಂಚಿನ ಭಾಗವಿದೆಂದು ತನಿಖೆಗಳು ಸೂಚಿಸುತ್ತಿವೆ. ಅಮಿತ್ ಷಾ ತರುವಾಯ ಗೃಹ ಸಚಿವರಾಗಿ ಬಂದ ಪ್ರಫುಲ್ ಪಟೇಲ್ ಕೂಡ ಈ ನಕಲಿ ಎನ್‌ಕೌಂಟರ್ ತನಿಖೆಯ ದಾರಿ ತಪ್ಪಿಸುವುದು ಹೇಗೆ ಎಂದು ಸಭೆ ಕರೆದು

ಚರ್ಚಿಸಿದ್ದರು. ಈ ಎಲ್ಲ ಅಂಶಗಳೂ ಸಿ.ಬಿ.ಐ. ಕೋರ್ಟ್‌ನ ಮುಂದಿಡುವ ವರದಿಯ ಭಾಗಗಳಾಗಿವೆ.

ಈ ರೀತಿಯ ಘಟನೆಗಳ ಬಗ್ಗೆ ನಾವೇನೂ ಆಶ್ಚರ್ಯ ಪಡಬೇಕಿಲ್ಲ. ಯಾಕೆಂದರೆ ಮುಖ್ಯಮಂತ್ರಿ ನರೇಂದ್ರ ಮೋದಿಯವರೇ 2007 ರ ಚುನಾವಣಾ ರ‍್ಯಾಲಿಯಲ್ಲಿ ಶೊರಾಬುದ್ದೀನ್‌ಗೆ "ತಕ್ಕ ಶಾಸ್ತಿಯಾಗಿದೆ" ಎಂದು ಹೇಳಿ ಈ ತೆರನ ಕಾನೂನು ಬಾಹಿರ ಹತ್ಯೆಗಳನ್ನು ಉತ್ತೇಜಿಸುವಂತೆ ಹೇಳಿದ್ದರು.

ಎನ್ ಕೌಂಟರ್ ಕೊಲೆಗಳು ಮೋದಿಯ ಸರ್ಕಾರದ ಅಂಗೀಕೃತ ಆಡಳಿತ ವಿಧಾನ.

ಅಲ್ಪ ಸಂಖ್ಯಾತರಿಗೆ ಮೋದಿ ಸರ್ಕಾರದಲ್ಲಿ ಜೀವದಿಂದಿರುವ ಭರವಸೆಯೇ ಇಲ್ಲದಿರುವಾಗ ಇನ್ನು ನ್ಯಾಯದ ಕನಸನ್ನೆಲ್ಲಿ ಕಾಣಬಹುದು.

**ಪರಿಸಮಾಪ್ತಿ**

ಭ್ರಷ್ಟ ಯುಪಿಎ ಸರ್ಕಾರದ ವಿರುದ್ಧ ಜನರಿಗಿರುವ ಅಸಂತೃಪ್ತಿಯನ್ನು ಬಳಸಿಕೊಂಡು ಮತ್ತೊಮ್ಮೆ ಗದ್ದುಗೆಗೆ ಏರಲು ಆರ್‌ಎಸ್‌ಎಸ್, ಬಿಜೆಪಿ ತೀವ್ರವಾಗಿ ಪ್ರಯತ್ನಿಸುತ್ತಿವೆ. ಯುಪಿಎಯನ್ನು ತಿರಸ್ಕರಿಸಬೇಕು ಎನ್ನುವಾಗಲೇ ಬಿಜೆಪಿ ಇದಕ್ಕೆ ಖಂಡಿತಾ ಪರ್ಯಾಯವಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಇದರ ಅಜೆಂಡ ಬಹಳ ಆಳವಾಗಿ ಭಾರತದ ಹಿತಾಸಕ್ತಿಯ ವಿರುದ್ಧವೇ ಇದೆ. ಎನ್‌ಡಿಎ ನಡೆಸಿದ ಆರು ವರ್ಷಗಳ ಆಡಳಿತದಲ್ಲಿ ಬಹುಸಂಖ್ಯಾತರ ಪರ ಎಂಬ ಹೆಸರಿನಲ್ಲಿ ಅವರು ನಡೆಸಿದ ಕೋಮುವಾದೀ ರಾಜಕಾರಣ ಮತ್ತು ಜನವಿರೋಧೀ ಆರ್ಥಿಕ ನೀತಿಗಳನ್ನು ಜನ ನೋಡಿದ್ದಾರೆ. ಶಿಕ್ಷಣ, ಸಂಸ್ಕೃತಿ, ಚರಿತ್ರೆ ಈ ಎಲ್ಲವುಗಳ ಕೇಸರೀಕರಣವನ್ನು ಯಾರು ತಾನೆ ಮರೆಯಲು ಸಾಧ್ಯ? ಅವರನ್ನು ಪ್ರಶ್ನೆ ಮಾಡಲು ಧೈರ್ಯ ತಾಳಿದ ಬುದ್ಧಿಜೀವಿಗಳನ್ನು ಗುರಿಯಾಗಿಸಿ ಮಾಡಿದ ದಾಳಿ ಇಷ್ಟು ಬೇಗ ಮರೆತು ಹೋಗುತ್ತದೆಯೇ? ಅಲ್ಪಸಂಖ್ಯಾತರ ಮೇಲೆ ನಡೆಸಿದ ಉಗ್ರದಾಳಿ ನಮ್ಮ ನೆನಪಿನಿಂದ ಮಾಸಲು ಸಾಧ್ಯವೆ? ಆದರೆ ಹಿಂದುತ್ವ ಸಿದ್ಧಾಂತ ಹಾಗೂ ಪ್ರಯೋಗಗಳನ್ನು ಹರಿಬಿಟ್ಟ ಆರ್‌ಎಸ್‌ಎಸ್, ಬಿಜೆಪಿ ಮತ್ತು ಅದರ ಎಲ್ಲಾ ಉಗ್ರಗಾಮಿ ಸಂಘಟನೆಗಳಾದ ವಿಎಚ್‌ಪಿ, ಭಜರಂಗದಳಗಳ ದಾಳಿ ಅಲ್ಪಸಂಖ್ಯಾತರ ಮೇಲೆ ಮಾತ್ರ ನಡೆದಿರಲಿಲ್ಲ. ಚಾತುರ್ವರ್ಣ ಜಾತಿ ಪದ್ಧತಿಯನ್ನು ಸಮರ್ಥಿಸುವ ಅವರ ಸಿದ್ಧಾಂತವು ಎಸ್.ಸಿ/ಎಸ್.ಟಿಗಳ ವಿರುದ್ಧ ಇದೆ; ಮನುಸ್ಮೃತಿಯ ಕಟ್ಟಾ ಅನುಯಾಯಿಗಳಾದ ಅವರು ಮಹಿಳೆಯರನ್ನು ಎರಡನೇ ದರ್ಜೆ ಪ್ರಜೆಗಳನ್ನಾಗಿ ಪರಿಗಣಿಸುತ್ತಾರೆ; ಸ್ವಾತಂತ್ರ್ಯಾನಂತರದ ಅತ್ಯಂತ ದೊಡ್ಡ ಸರ್ಕಾರೀ ಪ್ರಾಯೋಜಿತ ಕೋಮು ಹಿಂಸಾಚಾರದ ಅಧ್ಯಕ್ಷತೆಯನ್ನು ವಹಿಸಿದ್ದ ಮೋದಿ ಈಗ ಭಾರತದ ಹೊಣೆಯನ್ನು ಹೊತ್ತು ಮತ್ತೆ ಅದೇ ಕಾರ್ಯಸೂಚಿ ಜಾರಿಗಾಗಿ ಹವಣಿಸುತ್ತಿದ್ದಾರೆ.

ಎಡಪಕ್ಷಗಳು ಪ್ರಾಬಲ್ಯ ಹೊಂದಿರುವ ರಾಜ್ಯಗಳಲ್ಲಿ ಮಾತ್ರ ಕೋಮು ಧೃವೀಕರಣದ ಮತ್ತು ಕೋಮು ಹಿಂಸೆಯನ್ನು ಪ್ರಚೋದಿಸುವ ಪ್ರಯತ್ನಗಳನ್ನು ಹಿಮ್ಮೆಟ್ಟಿಸಲು ಸಾಧ್ಯವಾಗಿದೆ ಎಂಬುದನ್ನು ಗಮನಿಸಬೇಕು. ಪಶ್ಚಿಮ ಬಂಗಾಳದ ಎಡಪಕ್ಷಗಳ ಆಳ್ವಿಕೆಯ ಕೊನೆಯ ಮೂರು ವರ್ಷಗಳ ಅವಧಿಯಲ್ಲಿ ಕೇವಲ 12 ರಿಂದ 31 ರೊಳಗೆ ಸೀಮಿತವಾಗಿದ್ದ ಕೋಮು ಹಿಂಸೆಯ ಘಟನೆಗಳು ಈಗ ತೃಣಮೂಲ ಕಾಂಗ್ರೆಸ್ಸಿನ ಆಡಳಿತದಲ್ಲಿ ಹೆಚ್ಚಾಗಿದೆ. 2013ರಲ್ಲೇ ಅಂತಹ 106 ಘಟನೆಗಳು ನಡೆದಿವೆ. ಫೆಬ್ರವರಿ ಮತ್ತು ಆಗಸ್ಟ್ 2013ರ ಅವಧಿಯ ಏಳು ತಿಂಗಳಲ್ಲೇ 42 ದೊಡ್ಡ ಕೋಮು ಗಲಭೆಗಳು ಪಶ್ಚಿಮಬಂಗಾಳದಲ್ಲಿ ಘಟಿಸಿವೆ. ಎಲ್ಲಿ ಎಡಪಕ್ಷಗಳು ಬಲಿಷ್ಠವಾಗಿವೆಯೋ ಅಂಥಲ್ಲಿ ಆರ್‌ಎಸ್‌ಎಸ್, ಬಿಜೆಪಿಯನ್ನು ತಡೆಗಟ್ಟಿ ಅವರ ಕುತಂತ್ರಗಳನ್ನು ಹಿಮ್ಮೆಟ್ಟಿಸಲು ಸಾಧ್ಯ ಎನ್ನುವ ವಾಸ್ತವಾಂಶವನ್ನು ಒತ್ತಿ ಹೇಳಬೇಕಾದ ಅಗತ್ಯವಿಲ್ಲ; ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸಲಾಗಿದೆ ಮತ್ತು ಅವರ ಏಳಿಗೆಯನ್ನು ಖಾತರಿಪಡಿಸಲಾಗಿದೆ. ಪಶ್ಚಿಮ ಬಂಗಾಳ, ತ್ರಿಪುರಾ ಮತ್ತು ಕೇರಳ ರಾಜ್ಯಗಳ ಎಡ ಸರ್ಕಾರಗಳ ಸಾಧನೆಗಳೇ ಇದಕ್ಕೆ ಸಾಕ್ಷಿ.

ನಮ್ಮ ಗಣತಂತ್ರದ ಜಾತ್ಯಾತೀತ ಸ್ವರೂಪ ಇಂದು ಗಂಡಾಂತರದಲ್ಲಿದೆ ಮತ್ತು ಮತಧರ್ಮ, ಜಾತಿ ಅಥವಾ ಲಿಂಗಬೇಧವಿಲ್ಲದೇ ಪ್ರತಿಯೊಬ್ಬ ಭಾರತೀಯನೂ ಹಿಂಸೆಯ ಹಾಗೂ ತಾರತಮ್ಯದ ಭಯವಿಲ್ಲದೇ ಬದುಕುವ ಹಕ್ಕು ಕೂಡ ಇಂದು ಅಪಾಯದಲ್ಲಿದೆ. ಅದಕ್ಕಾಗಿ ಬಿಜೆಪಿಯನ್ನು ಸೋಲಿಸಿ.

# ಕಾಂಗ್ರೆಸನ್ನು ತಿರಸ್ಕರಿಸಿ,
# ಬಿಜೆಪಿಯನ್ನು ಸೋಲಿಸಿ
# ಸಿಪಿಐ(ಎಂ)ಗೆ ಮತ ನೀಡಿ

# ಒಂದು ಜಾತ್ಯಾತೀತ ಮತ್ತು
# ಪ್ರಜಾಸತ್ತಾತ್ಮಕ ಪರ್ಯಾಯಕ್ಕಾಗಿ
# ಎಡಪಕ್ಷಗಳನ್ನು ಬಲಪಡಿಸಿ

ಬೆಲೆ : ರೂ. 5.00

ಮೂಲ:
ಸಿಪಿಐ(ಎಂ) ಕೇಂದ್ರ ಸಮಿತಿ, ನವದೆಹಲಿ

ಪ್ರಕಟಣೆ:
ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿ
ನಂ. 37/ಎ, 8ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು – 560086

ಮುದ್ರಣ: ಕ್ರಿಯಾ, ಎಸ್.ಆರ್. ನಗರ, ಬೆಂಗಳೂರು
ಪ್ರತಿಗಳು: 3,000